# ಆಹಾ ಸುದ್ದಿ!

★ ಸಸಿತೋಟ

ಇದು ನಿಜಕ್ಕೂ 'ಹೋಂ ಸ್ವೀಟ್ ಹೋಂ'. ಫ್ರಾನ್ಸ್‌ನಲ್ಲಿ ಇಡೀ ಮನೆಯನ್ನೇ ಚಾಕೊಲೇಟ್‌ನಿಂದ ನಿರ್ಮಿಸಲಾಗಿದ್ದು, ಒಳಗಿರುವ ಪೀಠೋಪಕರಣ, ಪುಸ್ತಕಗಳು ಎಲ್ಲವೂ ಸಿಹಿ ಚಾಕೊಲೇಟ್‌ನಿಂದ ತಯಾರಾಗಿವೆಯಂತೆ. ಅಲ್ಲಿ ಬಾಡಿಗೆ ನೀಡಿ ಒಂದು ದಿನ ಉಳಿದುಕೊಂಡು ಮಜಾ ಸವಿಯಬಹುದು. ಆದರೆ ಊಟ, ತಿಂಡಿ ಸೇವನೆಗೆ ಮಾತ್ರ ಕಡ್ಡಾಯವಾಗಿ ಹೊರಗಡೆ ಬರಲೇಬೇಕಂತೆ. ಹಸಿವಾದಾಗ ಗೋಡೆ, ಛಾವಣಿಯನ್ನೇ ಹರಿದು ತಿಂದುಬಿಡಬಹುದು ಎಂಬ ಭಯವಿರಬಹುದು.



ಮಿಸ್ ಬಾಂಗ್ಲಾದೇಶ ಸ್ಪರ್ಧೆಯ ಕೊನೆಯ ಸುತ್ತಿನಲ್ಲಿ ಒಬ್ಬಾಕೆಗೆ ನಿರ್ಣಾಯಕರು ಪ್ರಶ್ನೆ ಕೇಳಿದರಂತೆ, 'ಎಚ್‌ಟುಒ ಎಂದರೆ ಏನು?' ಆಕೆ ಅಂದವಾದ ತಲೆಯನ್ನು ಅಲ್ಲಾಡಿಸಿ ನಕ್ಕಳಂತೆ. ನಿರ್ಣಾಯಕರೇ ಸೋತು 'ಎಚ್‌ಟುಒ ಎಂದರೆ ನೀರು' ಎಂದರಂತೆ. ಆಗ ಆಕೆ 'ಯಾವುದೋ ಹೊಟೇಲ್ ಹೆಸರು ಎಂದುಕೊಂಡಿದ್ದೆ' ಎಂದಳಂತೆ. ಅಷ್ಟಾದರೂ ಬುದ್ಧಿ ಇದೆಯಲ್ಲ ಆ 'ಬ್ಯೂಟಿ ಆ್ಯಂಡ್ ಬ್ರೇನ್'ಗೆ ಎಂದು ನಿರ್ಣಾಯಕರು ನಿಟ್ಟುಸಿರು ಬಿಟ್ಟರಂತೆ.




ಅಮೆರಿಕದಲ್ಲಿನ ಬೆನ್ ಹಾಗೂ ಜಾಕಿ ಎಂಬ ದಂಪತಿ ಫುಟ್ಬಾಲ್ ಟಿಕೆಟ್ ಖರೀದಿಗೆಂದು ವರ್ಷದಿಂದ ಉಳಿತಾಯ ಮಾಡಿದ್ದ ಒಂದು ಸಾವಿರಕ್ಕೂ ಅಧಿಕ ಡಾಲರ್ ಅವಸ್ಥೆ ನೋಡಿ. ದಂಪತಿಯ ಎರಡು ವರ್ಷದ ಪುಟಾಣಿ ಅದು ಹೇಗೋ ಅಪ್ಪ– ಅಮ್ಮನ ಉಳಿತಾಯ ಎಗರಿಸಿ ತರಕಾರಿ ಕತ್ತರಿಸುವ ಉಪಕರಣಕ್ಕೆ ತುರುಕಿದನಂತೆ. ಅಪ್ಪ– ಅಮ್ಮನಿಗೆ ವರ್ಷವಾದರೆ ಮಗನಿಗೆ ನಿಮಿಷ.

ಚೀನಾದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನರ್ತಿಸುವವರ ಸಂಖ್ಯೆ ಜಾಸ್ತಿಯಾಗಿದೆಯಂತೆ. 50 ವರ್ಷಗಳಿಗಿಂತ ಮೇಲ್ಪಟ್ಟವರು ಹೊಳೆಯುವ ಕ್ಯಾಪ್, ದೊಡ್ಡ ಆಕಾರದ ಕನ್ನಡಕ ಧರಿಸಿ ಕಾಲಕ್ಷೇಪಕ್ಕೆ, ಒತ್ತಡ ಕಡಿಮೆ ಮಾಡಿಕೊಳ್ಳಲು ಕುಣಿಯುತ್ತಾರಂತೆ.





ಜರ್ಮನಿಯಲ್ಲಿ ನಡೆದ ಸಿಹಿ ಕುಂಬಳಕಾಯಿ ದೋಣಿ ಸ್ಪರ್ಧೆ. ತಾವೇ ಬೆಳೆದ, ತಿರುಳು ತೆಗೆದು ಹಾಕಿದ ಭರ್ಜರಿ ಕುಂಬಳಕಾಯಿಯಲ್ಲಿ ಕುಳಿತು ಹುಟ್ಟು ಹಾಕಬೇಕಂತೆ. ಕುಂಬಳಕಾಯಿ ಭರ್ಜರಿಯಾಗಿದ್ದರೂ, ಭರ್ಜರಿ ವ್ಯಕ್ತಿಗಳಿಗೆ ಮಾತ್ರ ಅವಕಾಶವಿಲ್ಲವಂತೆ.

ಗ್ರಂಥಾಲಯದಿಂದ ಒಯ್ದ ಪುಸ್ತಕವನ್ನು ಗರಿಷ್ಠವೆಂದರೆ ಎಷ್ಟು ವರ್ಷಗಳ ಮೇಲೆ ವಾಪಸ್ಸು ಮಾಡಿರಬಹುದು? 84 ವರ್ಷಗಳ ಹಿಂದೆ ಅಮೆರಿಕದ ಗ್ರಂಥಾಲಯವೊಂದರಿಂದ ಎಡ್ಗರ್ ಲೀ ಎಂಬಾಕೆ 1934ರಲ್ಲಿ ಒಯ್ದಿದ್ದ 'ಸ್ಪೂನ್ ರಿವರ್ ಅಂಥಾಲಜಿ' ಎಂಬ ಪುಸ್ತಕವನ್ನು ಆಕೆಯ ಮಗ ಇತ್ತೀಚೆಗೆ ವಾಪಸ್ಸು ಮಾಡಿದ್ದು ದಾಖಲೆಯಂತೆ. ಅದೂ 3 ಡಾಲರ್ ದಂಡ ತೆತ್ತು. ಆಕೆಯ ಮಗ ಇಲಿ, ಜಿರಳೆಗಳಿಗೆ ಧನ್ಯವಾದ ಹೇಳಿರಬಹುದು, ಪುಸ್ತಕವನ್ನು ಮೂಲ ಶೇಪ್‌ನಲ್ಲಿ ಇಟ್ಟಿದ್ದಕ್ಕೆ.